ತೊಂದರೆ ಆಗತಕ್ಕ ಪರಿಸ್ಥಿತಿ ಇದೆ. ಫಾರೆಸ್ಟ್ ಜಮೀನು ಎಂಬ ನೆಪದಲ್ಲಿ ಬಡಪರ ಜಮೀನನ್ನು ಕಸಿದು ಕೊಳ್ಳುವುದು ಸರಿಯೇ ? ಈಗಲಾದರೂ ಅವರ ಜಮೀನನ್ನು ಅವರಿಗೆ ಕೊಡಿಸುತ್ತೀರಾ ?

ಶ್ರೀ ಜಿ. ರಾಮೇಗೌಡ.—ಮಹಾಸಭೆಯಲ್ಲಿ ತೀರ್ಮಾನವಾಗಿ ಆದು ಆಕ್ಟ್ ಆದಮೇಲೆ ಏನೂ ಮಾಡುವುದಕ್ಕಾಗುವುದಿಲ್ಲ. ಮಹಾಸಭೆಯಲ್ಲಿ ಏನೇನು ಚರ್ಚೆಯಾಗಬೇಕೋ ಅದೆಲ್ಲಾ ಆಗಿ ತೀರ್ಮಾನ ವಾಗಿದೆ. ಅದಕ್ಕೆ ಮಾನ್ಯ ಸದಸ್ಯರ ಒಪ್ಪಿಗೆ ಕೂಡ ಇದೆ ನಾವು ಕಾನೂನಿನಂತೆ ಹೋಗಬೇಕಾದ್ದು ಧರ್ಮ, ನ್ಯಾಯ. ಅವರು ನಿರ್ಗತಿಕರಾದರೆ ಅವರಿಗೆ ಬೇರೆ ವಿಧದಲ್ಲಿ ಜಮೀನು ಒದಗಿಸಬಹುದು. ಆ ರೀತಿ ಅವರು ಅರ್ಜಿ ಹಾಕಿಕೊಂಡರೆ ಸರ್ಕಾರ ಅದನ್ನು ಗಮನಿಸುತ್ತದೆ.

Market Cess and Sales Tax on pulses and food-grains.

614. SRI M. Y. PATIL (Afzalpur).—Will the Minister of State for Regulated Market be pleased to state :—

(a) the rate at which Market Cess and Sales-tax are levied on pulses and food-grains in the Regulated Markets in our State when compared to the rates in the Regulated Markets of the sister State of Maharashtra;

(b) whether it has come to the notice of Government that there have been adverse effects on the business of food-grains and pulses in the Regulated Markets of our State due to difference in rates;

(c) if so, the measures proposed to be taken to rectify the situation with a view to see that there would not be any adverse effects on food-grains busines in the State?

SRI A. B. JAKANUR (Minister of State for Regulated Markests).—

(a) No market cess is levied by the Regulated Markets on pulses and food-grains in Karnataka. Levy of sales-tax does not come under the provisions of KAPM(R) Act 1966.

(b) Doet not arise in view of above reply.

(c) —Do—

ಶ್ರೀ ಎಂ. ವೈ. ಪಾಟೀಲ್.—ಮಾನ್ಯ ಅಧ್ಯಕ್ಷಣಿಯವರೇ, ಈಗ ಗುಲ್ಬರ್ಗ, ಬೀದರ್, ಬೆಳಗಾಂ ಮಾರುಕಟ್ಟೆಯಲ್ಲಿ ಸರ್ಕಾರದವರು ಆಹಾರಧಾನ್ಯಗಳ ಮೇಲೆ ೪ ಪರ್ಸೆಂಟ್ ತೆರಿಗೆ ವಿಧಿಸಿರುವುದರಿಂದ ಮತ್ತು ಮಾರ್ಕೆಟ್ ಫೀ ಮಹಾರಾಷ್ಟ್ರಕ್ಕಿಂತ ಹೆಚ್ಚಾಗಿರುವುದರಿಂದ ಅಲ್ಲಿನ ಧವಸಧಾನ್ಯಗಳೆಲ್ಲಾ ಮಹಾರಾಷ್ಟ್ರಕ್ಕೆ ಹೋಗುತ್ತಿದೆ. ಗುಲ್ಬರ್ಗ, ಬೆಳಗಾಂ, ಬೀದರ್ ಮಾರುಕಟ್ಟೆಯಲ್ಲಿ ಮಾರಾಟವಾಗುತ್ತಿಲ್ಲ. ಇದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೇ ?

†ಶ್ರೀ ಎ. ಬಿ. ಜಕನೂರ್.—ಮಾನ್ಯ ಅಧ್ಯಕ್ಷಣಿಯವರೇ, ಮಾರ್ಕೆಟ್‌ಸೆಸ್ ಆಗಲೀ, ಸೇಲ್ಸ್ ಟ್ಯಾಕ್ಸ್ ಆಗಲೀ ಆದನ್ನು ವಸೂಲು ಮಾಡುವುದು ಮಾರ್ಕೆಟ್ ಕಮಿಟಿ ಕೆಲಸ ಅಲ್ಲ. ಮಾನ್ಯ ಸದಸ್ಯರು ಬೆಳಗಾಂ, ಗುಲ್ಬರ್ಗ ಮತ್ತು ಬೀದರ್‌ನಿಂದ ಆಹಾರಧಾನ್ಯಗಳು ಮಹಾರಾಷ್ಟ್ರಕ್ಕೆ ಹೋಗುತ್ತಿದೆ ಎಂದು ಹೇಳಿದರು. ಆದು ಹೋಗುತ್ತಿರಬಹುದು. ಆದರೆ ನಮ್ಮಲ್ಲಿ ಪ್ರತಿ ವರ್ಷ ಎಷ್ಟು ಮಾಲು ಬರುತ್ತಿತ್ತೊ

ಅಷ್ಟು ಬರುತ್ತಿದೆ. ಅಲ್ಲದೆ ವರ್ಷೇ ವರ್ಷೇ ಇದರ ಪ್ರಮಾಣ ಹೆಚ್ಚಾಗುತ್ತಿದೆಯೇ ಹೊರತು ಕಡಿಮೆ ಯಾಗಿಲ್ಲ. ಮಹಾರಾಷ್ಟ್ರಕ್ಕೆ ಹೆಚ್ಚಾಗಿ ಮಾಲು ಹೋಗುತ್ತಿದ್ದರೆ ಕರ್ನಾಟಕದಲ್ಲಿ ಮಾರ್ಕೆಟ್ ಫೀ ಜಾಸ್ತಿ ಎಂಬುದು ಅರ್ಥವಲ್ಲ. ಕೆಲವು ಜನ ಅಲ್ಲಿಗೆ ತೆಗೆದುಕೊಂಡು ಹೋಗಬಹುದು. ಇಲ್ಲಿಂದ ಅಲ್ಲಿಗೆ ಹೋಗ ಬಹುದು, ಅಲ್ಲಿಂದ ಇಲ್ಲಿಗೆ ಬರಬಹುದು. ನಮ್ಮಲ್ಲಿ ಫೀ ಜಾಸ್ತಿ ಇರುವುದರಿಂದ ಆ ರೀತಿ ಆಯಿತು ಎಂದು ಹೇಳುವುದು ಸರಿಯಲ್ಲ ಎಂದು ಹೇಳಬಯಸುತ್ತೇನೆ.

ಶ್ರೀ ಎಂ. ವೈ. ಪಾಟೀಲ್.—ಮಹಾರಾಷ್ಟ್ರದಲ್ಲಿ ಮಾರ್ಕೆಟ್ ಫೀ ೫೦ ಪೈಸೆ ಇದೆ. ಸೇಲ್ಸ್ ಟ್ಯಾಕ್ಸ್ ಆಹಾರಧಾನ್ಯದ ಮೇಲೆ ಹಾಕುವುದು ಎಲ್ಲಾ ಸೇರಿದರೆ ಒಂದು ಕ್ವಿಂಟಾಲ್‌ಗೆ ಅಲ್ಲಿಗೂ ಇಲ್ಲಿಗೂ ೨೦ ರೂಪಾಯಿ ವ್ಯತ್ಯಾಸ ಬರುತ್ತದೆ. ಆದ್ದರಿಂದ ಎಲ್ಲಾ ಮಾಲುಗಳೂ ಅಲ್ಲಿಗೆ ಹೋಗುತ್ತಿದೆ. ಆದ್ದರಿಂದ ದಯವಮಾಡಿ ಇದರ ಬಗ್ಗೆ ಸೂಕ್ತ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎ. ಬಿ ಜಕನೂರ್.—ಎಲ್ಲಾ ಮಾಲೂ ಹೋಗುವುದಿಲ್ಲ. ಸ್ವಲ್ಪ ಹೋಗುತ್ತಿರಬಹುದು. ಮಹಾರಾಷ್ಟ್ರದಲ್ಲೂ ಮಾರ್ಕೆಟ್ ಫೀ ೩೦ ಪೈಸೆಯಿಂದ ೫೦ ಪೈಸೆ ಮಾಡಿದ್ದಾರೆ. ನಮ್ಮಲ್ಲೂ ಮೊದಲು ಅಷ್ಟೇ ಇತ್ತು. ಆದರೆ ಮಾರ್ಕೆಟ್ ಕಮಿಟಿಗಳಿಗೆ ಹೆಚ್ಚು ಉತ್ಪನ್ನ ಇಲ್ಲದೇ ಇರುವುದರಿಂದ ೧ ರೂಪಾಯಿ ಮಾಡಿದ್ದೇವೆ. ಇದು ಹೆಚ್ಚೇನಲ್ಲ. ಈಗ ಮಹಾರಾಷ್ಟ್ರದಲ್ಲಿ ಸಹ ೫೦ ಪೈಸೆ ಇರುವುದನ್ನು ಒಂದು ರೂಪಾಯಿಗೆ ಮಾಡಬೇಕೆಂಬ ವಿಷಯ ಅವರ ಪರಿಶೀಲನೆಯಲ್ಲಿದೆ. ಸೇಲ್ಸ್‌ಟ್ಯಾಕ್ಸ್ ವಿಚಾರ ಮಾನ್ಯ ಸದಸ್ಯರು ಹೇಳಿದ್ದಾರೆ. ಸೇಲ್ಸ್‌ಟ್ಯಾಕ್ಸ್ ಮಾರ್ಕೆಟ್ ಕಮಿಟಿಗಳು ವಸೂಲು ಮಾಡುತ್ತಿಲ್ಲ. ಮಾರ್ಕೆಟ್ ಕಮಿಟಿಗೂ ಸೇಲ್ಸ್‌ಟ್ಯಾಕ್ಸಿಗೂ ಏನೂ ಸಂಬಂಧವಿಲ್ಲ. ದಯವಿಟ್ಟು ಇದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು.

ಶ್ರೀ ಎಂ. ವೈ. ಪಾಟೀಲ್.—ಸೇಲ್ಸ್‌ಟ್ಯಾಕ್ಸಿನಿಂದ ನಮಗೂ ಮಹಾರಾಷ್ಟ್ರಕ್ಕೂ ವ್ಯವಹಾರದಲ್ಲಿ ವ್ಯತ್ಯಾಸ ಬರುತ್ತಿದೆ. ತಾವು ಮಾರ್ಕೆಟ್ ಸುಧಾರಣೆ ಮಾಡುವ ಸಲುವಾಗಿ ಕ್ರಮ ತೆಗೆದುಕೊಂಡಿರುವುದರಿಂದ ಕಳ್ಳ ವ್ಯವಹಾರಕ್ಕೆ ಆಸ್ಪದ ಕೊಟ್ಟಹಾಗಾಗಿದೆ. ರಶೀತಿ ಇಲ್ಲದೇ ವ್ಯವಹಾರಗಳು ನಡೆಯುತ್ತಿವೆ. ಗುಲ್ಬರ್ಗ, ಬೀದರ್ ಮತ್ತು ಬೆಳಗಾಂಗಳಲ್ಲಿ ಈ ರೀತಿ ಕಳ್ಳ ವ್ಯವಹಾರಗಳು ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಬಿ. ಜಕನೂರ್.—ಬಂದಿಲ್ಲ.

9-30 A.M.

Villages without Communication facilities in Balloli Constituency.

95. SRI S. S. ARAKERI (Balloli).—Will the Minister for Public Works be pleased to state :—

(a) the number of villages which have no communications facilities in Balloli Constituency, Indi Taluk, Bijapur District;

(b) whether the Government intend to take steps to sanction communication facilities by providing at least roads under Rural Communication Programme ?

SRI A. B. JAKANUR (Minister of State for Regulated Markets).—[On behalf of SRI S. BANGARAPPA (Minister for Public Works)].—

(a) All the villages in Balloli constituency have communication facilities.